

ನೈಸರ್ಗಿಕ ಬಣ್ಣ ಮತ್ತು ವಸ್ತ್ರಕ್ಕೆ ಆದ್ಯತೆ ನೀಡಿ ಹೊಂದಿಸಿಕೊಳ್ಳುವ ಈ ಬೊಹೊ ಸ್ಟೈಲ್ ಸಡಿಲವಾಗಿದ್ದು, ಆರಾಮದಾಯಕ ಅನುಭವ ನೀಡುತ್ತದೆ.

■ ಎಸ್.ಹೆಗಡೆ

# ಬೊಹೊ ಬೆಡಗು

ಅದು ಅರವತ್ತರ ದಶಕ. ಕಲಾವಿದರು, ಅಲೆಮಾರಿಗಳು ಭರಪೂರು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ಕಾಲಘಟ್ಟವದು. ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಕೇವಲ ವಾಕ್‌ಸ್ವಾತಂತ್ರ್ಯ ಮಾತ್ರವಲ್ಲ, ಉಡುಪು, ಶೂ, ಇತರ ಅಲಂಕಾರಿಕ ಸಾಧನಗಳನ್ನು ಧರಿಸುವ ಮೂಲಕ ಯುವಕ/ಯುವತಿಯರು ಸ್ಟೈಲ್ ಅಭಿವ್ಯಕ್ತಿಯಲ್ಲೂ ಮುಕ್ತ ಸ್ವಾತಂತ್ರ್ಯದ ಬೆನ್ನು ಹತ್ತಿದರು. ನೋಡಲು ಅಂದವಾಗಿರಬೇಕು; ಕಲಾತ್ಮಕವಾಗಿರಬೇಕು; ಹೊಸತನವಿರಬೇಕು; ಸಂಪ್ರದಾಯದಿಂದ ಒಂಚೂರು ಬಿಡುಗಡೆಯ ನಿರಾಳತೆ ಅನುಭವಿಸಬೇಕು; ಅಂತರಾಳದಲ್ಲಿ ಯಾವುದೇ ಕುದಿಯಿಲ್ಲದೇ ಪ್ರಶಾಂತಿ ನೆಲೆಸಿರಬೇಕು ಎಂಬ ನಿರಂತರ ಹುಡುಕಾಟದಲ್ಲಿದ್ದಾಗಲೇ ಹುಟ್ಟಿದ್ದು 'ಬೊಹೆಮಿಯ' ಅಥವಾ ಚಿಕ್ಕದಾಗಿ 'ಬೊಹೊ' ಸ್ಟೈಲ್ ಅಥವಾ ಸರಳವಾಗಿ ಜಿಪ್ಸಿ ಸ್ಟೈಲ್.

ಅಂದಿನಿಂದ ಇಂದಿನವರೆಗೆ ಫ್ಯಾಷನ್ ಲೋಕದಲ್ಲಿ ದಿರಿಸುಗಳ ವಿನ್ಯಾಸ ಬದಲಾಗುತ್ತಲೇ ಇದೆ. ಆದರೆ ಬೊಹೊ ಸ್ಟೈಲ್‌ನಲ್ಲಿ ಮಾತ್ರ ಎದ್ದು ಕಾಣಿಸುವ ಬದಲಾವಣೆ ಇಲ್ಲವೇ ಇಲ್ಲ ಎನ್ನಬಹುದು. ಮ್ಯಾಕ್ಸಿ, ಸ್ಕರ್ಟ್, ರಿಪ್ಡ್ ಜೀನ್ಸ್, ಮಂಡಿಯವರೆಗೆ ಮಾತ್ರ ಮುಚ್ಚುವ ಸಡಿಲ ರಾಂಪರ್, ದೊಗಳೆ ಷರ್ಟ್, ಜಾಕೆಟ್, ಕತ್ತಿಗೆ ಸ್ಕಾರ್ಫ್, ತಲೆಗೆ ಬ್ಯಾಂಡ್, ಕಾಲಿಗೆ ಕೌಬಾಯ್ ಶೂ, ಕೈಗೆ, ಕತ್ತಿಗೆ ಮಣಿಸರಗಳ ಓಲಾಟ... ಬದಲಾಗಿದ್ದೆಂದರೆ ಇಂತಹ ಉಡುಪುಗಳಿಗೆ ಬಳಸುವ ಬಟ್ಟೆಗಳು ಮಾತ್ರ.

ಪಾಶ್ಚಾತ್ಯರಲ್ಲಿ, ಅದರಲ್ಲೂ ಅಲೆಮಾರಿ (ಜಿಪ್ಸಿ)ಗಳಲ್ಲಿ ಮಾತ್ರ ಕಂಡು ಬರುತ್ತಿದ್ದ ಈ ಉಡುಪಿನ ವೈಖರಿ ಈಗ ಭಾರತೀಯರಲ್ಲೂ ಧಾರಾಳವಾಗಿ ಸೇರಿಕೊಂಡಿದೆ. ಗೋವಾ ತೀರದಲ್ಲಿ ಅಲೆದಾಡುವ ವಿದೇಶಿ ಪ್ರವಾಸಿಗರ ಈ ಸ್ಟೈಲ್ ಈಗ ಬೆಂಗಳೂರಿನ ರಸ್ತೆಗಳಲ್ಲೂ ಕಾಣುವುದು ಸಾಮಾನ್ಯವಾಗಿಬಿಟ್ಟಿದೆ. ಇಂತಹ ದಿರಿಸುಗಳಿಗಾಗಿ ಎಲ್ಲೆಲ್ಲೋ ಹುಡುಕಿಕೊಂಡು ಅಲೆಯಬೇಕಾಗಿಲ್ಲ ಅಥವಾ ದುಬಾರಿ ಬೆಲೆ ತೆತ್ತು ಷೋ ರೂಮಿನಲ್ಲಿ ಖರೀದಿಸುವ ಅಗತ್ಯವೂ ಇಲ್ಲ. ಫ್ಯಾಕ್ಟರಿ ಸೆಕೆಂಡ್ಸ್‌ಗಳನ್ನು ಮಾರುವ ಗಲ್ಲಿಗಳ ಅಂಗಡಿಗಳಲ್ಲೂ ಇವು ಕೈಗೆಟಕುವ ಬೆಲೆಯಲ್ಲೇ ದೊರಕುತ್ತವೆ. ಕೆಲವು ಕಡೆ ಉಡುಪು, ಶೂ, ಬ್ಯಾಗ್, ಬಳೆ, ಸರ, ಸ್ಕಾರ್ಫ್, ಹ್ಯಾಟ್ ಎಂದು ಹೊಂದಿಸಿಕೊಡುವ ಬೊಹೊ ಶಾಪ್‌ಗಳೇ ತಲೆ ಎತ್ತಿವೆ.



ಕೆಲವು ಸರಳ ಸೂತ್ರಗಳನ್ನು ಅಳವಡಿಸಿಕೊಂಡರೆ ಅಂದವಾಗಿ ಕಾಣುವ ಈ ಸ್ಟೈಲ್ ಅನ್ನು ನಿಮ್ಮದಾಗಿಸಿಕೊಳ್ಳಬಹುದು. ಬಟ್ಟೆಯನ್ನು ಆಯ್ಕೆ ಮಾಡುವಾಗ ನೈಸರ್ಗಿಕವಾದ ಬಣ್ಣ ಹಾಗೂ ವಸ್ತ್ರಕ್ಕೆ ಆದ್ಯತೆ ನೀಡಿ. ಅಂದರೆ ಹತ್ತಿ, ಲಿನಿನ್ (ನಾರು ಬಟ್ಟೆ), ವೆಲ್ವೆಟ್, ರೇಷ್ಮೆ, ಡೆನಿಮ್, ಕೃತಕ ಫರ್, ಕ್ರೋಷೆಟ್ ಮೊದಲಾದ ಬಟ್ಟೆಗಳು ಆರಾಮದಾಯಕ. ಇವುಗಳು ಬಿಳಿ, ಅರೆಬಿಳಿ, ಕಂದು, ಇಟ್ಟಿಗೆ ಕೆಂಪು, ಕಡ ಹಸಿರು ಅಥವಾ ಪಾಚಿ ಹಸಿರು ರಂಗಿನಲ್ಲಿದ್ದರೆ ಸ್ಟೈಲ್‌ಗೆ ಹೊಂದಿಕೊಳ್ಳುತ್ತವೆ.

ಕ್ರೋಷೆಟ್ ಅಂದರೆ ಕ್ರೋಷಾ ಕಡ್ಡಿಯಲ್ಲಿ ಉಣ್ಣೆ, ಹತ್ತಿ ನೂಲಿನಿಂದ ಹೆಣೆದ ಟಾಪ್ ಈ ಬೊಹೊ ಸ್ಟೈಲ್‌ನಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ ಎನ್ನಲಡ್ಡಿಯಿಲ್ಲ. ಬಿಳಿ, ಹಸಿರು, ಕಂದು, ಕಪ್ಪು ವರ್ಣಗಳಲ್ಲಿ ಈ ಟಾಪ್‌ಗಳು ಲಭ್ಯವಿದ್ದು, ಬೆಂಗಳೂರಿನ ಬೀದಿ ಬದಿಯಲ್ಲೂ ಇವುಗಳ ವ್ಯಾಪಾರ ಈಗೀಗ ಬಲು ಜೋರು. ಇದರಂತೆಯೇ ಲೇಸ್ ಟಾಪ್ ಕೂಡಾ ಒಂದು ರೀತಿಯ ಕೇರ್‌ಫ್ರೀ ಲುಕ್ ನೀಡುತ್ತದೆ. ಎತ್ನಿಕ್ ಪ್ರಿಂಟ್, ಚೌಕುಳಿ ವಿನ್ಯಾಸ ಕೂಡಾ ಜನಪ್ರಿಯವೇ.

ಈ ಬೊಹೊ ಸ್ಟೈಲ್‌ಗೆ ಮನಸ್ಸು ಮಾಡುವ ಮುನ್ನ ನೆನಪಿಡಬೇಕಾದ ಅಂಶವೆಂದರೆ ಉಡುಪು ಆರಾಮದಾಯಕವಾಗಿರಬೇಕು. ಫ್ಯಾಷನ್ ಷೋನಲ್ಲಿ ತೊಡುವಂತಹ ಬಿಗಿ ಉಡುಪುಗಳು ಬೇಡವೇ ಬೇಡ. ಏನಿದ್ದರೂ ಸಡಿಲವಾದ, ಜೋಲಾಡುವ ಉಡುಪುಗಳಿಗೆ ಇಲ್ಲಿ ಆದ್ಯತೆ. ಉದಾಹರಣೆಗೆ ಉದ್ದನೆಯ ಮ್ಯಾಕ್ಸಿ ಉಡುಪು. ಇದು ಸಡಿಲವಾಗಿದ್ದು, ನಿಮ್ಮ ದೇಹದ ಓರೆಕೋರೆಗಳನ್ನೂ ಮರೆಮಾಚುತ್ತದೆ. ಕಂದು ಬಣ್ಣದ ಮ್ಯಾಕ್ಸಿ ಮೇಲೊಂದು ಬಿಳಿ ಲೇಸ್ ಟಾಪ್ ತೊಡಬಹುದು. ಹಾಗೇ ಒಂದರ ಮೇಲೊಂದು ಉಡುಪುಗಳು ಅಂದರೆ ಲೇಯರ್ ಸ್ಟೈಲ್‌ನಲ್ಲಿ ದಿರಿಸು ಧರಿಸುವುದು ಕೂಡಾ ಬೊಹೊ ವೈಖರಿ. ಈ